ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಈಗ ಮಾನ್ಯ ಸಭಾನಾಯಕರು ಫಾರ್ಮಲ್ ಆಗಿ ರಿಪ್ಲೈ ಮಾಡಿಬಿಡಿ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆ ಇರಲಿ, ಅನೇಕ ವಿಷಯಗಳು ಇದ್ದವು. ತಾವು ಅದಕ್ಕೆ ಅನುಮತಿ ಕೊಡಬೇಕು ಎಂದು ಬೇಡಿಕೆ ಇದೆ.

MR. SPEAKER : Just a minute. ತಮಗೆಲ್ಲರಿಗೂ ಗೊತ್ತಿದೆ, ನಾವು ನಮ್ಮ ಕಾರ್ಯಕಲಾಪವನ್ನು ಇವತ್ತು ಮತ್ತು ನಾಳೆಗೆ ನಿಗದಿ ಮಾಡಿದ್ದೆವು. ಕೇಂದ್ರ ಚುನಾವಣಾ ಆಯೋಗದವರು ಚುನಾವಣಾ ವೇಳಾ ಪಟ್ಟಿಯನ್ನು ಪ್ರಕಟಣೆ ಮಾಡಿದ್ದಾರೆ. ನೈತಿಕವಾಗಿ ನಾವು ಇನ್ನು ಇಲ್ಲಿ ಕುಳಿತು ಹೆಚ್ಚು ಕೆಲಸ ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಬೆಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ನಾವು ಕಾನ್ಸಿಟಿಟ್ಯೂಷನಲ್ ಅಬ್ಲಿಗೇಷನ್ ಇಲ್ಲದೆ ಮನಿ ಬಿಲ್ಸ್ ಪಾಸ್ ಮಾಡುವುದು.

ಶ್ರೀ ವೈಜನಾಥ್ ಪಾಟೀಲ್ : ಅವರು ಈ ಕಾಲಕ್ಕೆ ಘೋಷಣೆ ಮಾಡುವುದು ತಪ್ಪು.

ಅಧ್ಯಕ್ಷರು : ಅದು ಆಯಿತು, ಅದನ್ನು ನಿಧಾನಕ್ಕೆ ಮಾತನಾಡೋಣ. ಅದರ ಬಗ್ಗೆ ಹೊರಗಡೆ ಹೇಳಿ.

ಶ್ರೀ ವೈಜನಾಥ್ ಪಾಟೀಲ್ : ನಮಗೆ ಇನ್ನು ಈ ಸದನ ನಡೆಸುವುದಕ್ಕೆ ಎರಡು ದಿವಸ ಇತ್ತು.

MR. SPEAKER : It is alright. Kindly cooperate with us.

ಶ್ರೀ ವೈಜನಾಥ್ ಪಾಟೀಲ್ : ಈಗ ಅವರು ಆರು ತಿಂಗಳು ಮೊದಲೆ ಚುನಾವಣೆ ಮಾಡಿದರೆ ಹಾಗೆಂದು ನಾವು ವಿಷಯಗಳನ್ನು ಬಿಡುವುದಕ್ಕೆ ಆಗುತ್ತದೆಯೇ? ತಾವು ಒಂದು ನಿಮಿಷ ಕೇಳಬೇಕು. ಹೋದ ಸಲ ಪಾರ್ಲಿಮೆಂಟ್ ಚುನಾವಣೆಯಲ್ಲಿ ಉತ್ತರ ಪ್ರದೇಶದ ಸರ್ಕಾರದವರು ಕಲ್ಯಾಣ ಸಿಂಗ್ ಮುಖ್ಯಮಂತ್ರಿ ಇದ್ದಾಗ...

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ (ಕರ್ನಾಟಕ ವಿಧಾನಸಭಾ ಸಚಿವಾಲಯ) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1. ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕ, 1999.
2. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾವಿಧೇಯಕ, 1999.